# ಸಂದಾಯ ಅತಿಥಿಗಳ (ಪಿಜಿ) ಸೌಲಭ್ಯವನ್ನು ಒದಗಿಸಲು ಮಾರ್ಗಸೂಚಿಗಳು

## ಪಿಜಿ ಮಾಲೀಕರು ಅನುಸರಿಸಬೇಕಾದ ಯಾವುದಾದರು ನಿಯಮಗಳಿವೆಯೇ?
## ಇದೆ. ಈ ಕೆಳಕಂಡ ನಿಯಮಗಳನ್ನು ಅನುಸರಿಸಬೇಕು

1. ಪಿಜಿ ಮಾಲೀಕರು ತಂಗುವ ಅತಿಥಿಗಳ ಎಲ್ಲಾ ಸಂಬಂಧಿತ ಮಾಹಿತಿಯನ್ನು (ಆಧಾರ್ ಕಾರ್ಡ್ / ಪಾಸ್ ಪೋರ್ಟ್ / ಚಾಲನಾ ಪರವಾನಗಿ, ಇತ್ಯಾದಿ) ಹೊಂದಿರಬೇಕು.
2. ಕೋವಿಡ್ ಸಂಬಂಧಿತ ಚಟುವಟಿಕೆಗಳನ್ನು ನಿರ್ವಹಿಸಲು ಪಿಜಿಗಳಿಂದ ನೋಡಲ್ ವ್ಯಕ್ತಿಯನ್ನು ನೇಮಿಸಬೇಕು.
3. ಎಲ್ಲಾ ಅತಿಥಿಗಳು ಮತ್ತು ಸಿಬ್ಬಂದಿಗಳು ಆರೋಗ್ಯ ಸೇತು ಮತ್ತು ಆಪ್ತಮಿತ್ರ ಮೊಬೈಲ್ ಅಪ್ಲಿಕೇಶನ್ (https://covid19.karnataka.gov.in/new-page/Mobile%20Applications/en) ಅನ್ನು ಡೌನ್‌ಲೋಡ್ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು.
4. ಎಲ್ಲಾ ಹೊಸ ಪ್ರವೇಶಿಕರು / ಹಿಂದಿರುಗಿದವರನ್ನು ಕೋವಿಡ್ ರೋಗಲಕ್ಷಣಗಳ ಪತ್ತೆಗಾಗಿ ಪರೀಕ್ಷಿಸಬೇಕು
5. ಪಿಜಿ ಕಟ್ಟಡದ ಎಲ್ಲಾ ಕೊಠಡಿಗಳು, ಸ್ನಾನಗೃಹಗಳು, ಶೌಚಗೃಹಗಳು, ಅಡಿಗೆಮನೆಗಳು, ಸಾಮಾನ್ಯ ಪ್ರದೇಶಗಳು ಮತ್ತು ಹೊರಭಾಗಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು.
6. ಎಲ್ಲಾ ಅತಿಥಿಗಳು ಮತ್ತು ಸಿಬ್ಬಂದಿ ಮುಖಗವುಸುಗಳನ್ನು ಧರಿಸಬೇಕು, ಸೋಪಿನಿಂದ ಕೈ ತೊಳೆಯುವುದು, ಹ್ಯಾಂಡ್ ಸ್ಯಾನಿಟೈಜರ್‌ಗಳನ್ನು ಬಳಸುವುದು ಮುಂತಾದ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು.

## ಪಿಜಿಯಲ್ಲಿ ಶಂಕಿತ ಕೋವಿಡ್ -19 ಪ್ರಕರಣವಿದ್ದರೆ ಏನು ಮಾಡಬೇಕು?

1. ಅಥಿತಿ ಅಥವಾ ಉದ್ಯೋಗಿ ಕೋವಿಡ್ -19 ರೋಗಲಕ್ಷಣಗಳನ್ನು ಹೊಂದಿದ್ದರೆ, ಅವನು / ಅವಳನ್ನು ತಕ್ಷಣ ಇತರ ವ್ಯಕ್ತಿಗಳಿಂದ ದೂರವಿರುವ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಸಾಧ್ಯವಾದರೆ, ಕೋಣೆ ಅಥವಾ ಪ್ರದೇಶವನ್ನು ಹುಡುಕಿ ಮುಚ್ಚಿದ ಬಾಗಿಲಿನಿಂದ ಅವರನ್ನು ಪ್ರತ್ಯೇಕಿಸಬೇಕು. ವಾತಾಯನಕ್ಕಾಗಿ ಕಿಟಕಿಗಳನ್ನು ತೆರೆಯುವುದು ಮತ್ತು ಎಸಿ ನಿಷ್ಕ್ರಿಯಗೊಳಿಸುವುದು.
2. ಅನಾರೋಗ್ಯದಿಂದ ಬಳಲುತ್ತಿರುವ ಅಥಿತಿಯು ಕಡ್ಡಾಯವಾಗಿ ಎನ್ -95 / ಮೂರು ಪದರದ ಮುಖಗವುಸು ಧರಿಸಬೇಕು.
3. ಶಂಕಿತ ಅಥಿತಿಯು ಇತರ ಅಥಿತಿ ಅಥವಾ ಸಿಬ್ಬಂದಿಯೊಂದಿಗೆ ಯಾವುದೇ ಸಂಪರ್ಕವನ್ನು ತಪ್ಪಿಸಬೇಕು, ಮೇಲ್ಮೈಗಳು ಮತ್ತು ವಸ್ತುಗಳನ್ನು ಸ್ಪರ್ಶಿಸುವುದನ್ನು ತಪ್ಪಿಸಬೇಕು.
4. ಶಂಕಿತರು ಕೆಮ್ಮುವಾಗ ಅಥವಾ ಸೀನುವಾಗ ಅವನು ಬಾಯಿ ಮತ್ತು ಮೂಗನ್ನು ಬಿಸಾಡಬಹುದಾದ ಹೀರುಹಾಳೆ (ಟಿಶ್ಯೂ ಪೇಪರ್) ಅಥವಾ ಮೊಣಕೈಯ ಹಿಂಭಾಗದಿಂದ ಮುಚ್ಚಬೇಕು ಮತ್ತು ನಂತರ ಹೀರು ಹಾಳೆಯನ್ನು ಮುಚ್ಚಿದ ತೊಟ್ಟಿಯಲ್ಲಿ ವಿಲೇವಾರಿ ಮಾಡಬೇಕು
5. ಲಭ್ಯವಿದ್ದರೆ ಅವರು ಪ್ರತ್ಯೇಕ ಸ್ನಾನಗೃಹವನ್ನು ಬಳಸಬೇಕು.
6. ಕೋವಿಡ್ -19 ರೋಗಲಕ್ಷಣಗಳನ್ನು ಅಥಿತಿ ದೂರವಾಣಿ ಮೂಲಕ ಅಥವಾ ಅನಾರೋಗ್ಯ ವರದಿ ಮಾಡಿದರೆ, ನಂತರ ರೋಗಿಗಳು ಅಥವಾ ಅಥಿತಿಗಳು "14410" ಸಂಖ್ಯೆಗೆ ಕರೆ ಮಾಡುವ ಮೂಲಕ ಆಪ್ತಮಿತ್ರಾ ಅವರನ್ನು ಸಂಪರ್ಕಿಸಬೇಕು ಅಥವಾ ವೈದ್ಯಕೀಯ ಸಮಾಲೋಚನೆಗಾಗಿ ಹತ್ತಿರದ ಜ್ವರ ಕ್ಲಿನಿಕ್ / ಆಸ್ಪತ್ರೆಗೆ ನೇರವಾಗಿ ಭೇಟಿ ನೀಡಬೇಕು.

## ಪಿಜಿಯಲ್ಲಿ ದೃಢಕರಿಸಿದ ಕೋವಿಡ್-19 ಪ್ರಕರಣವಿದ್ದರೆ ಏನು ಮಾಡಬೇಕು?

1. ಪಿಜಿಯಲ್ಲಿ ಕೋವಿಡ್ ದೃಢ ಪ್ರಕರಣ ಪತ್ತೆಯಾದ ನಂತರ, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಮತ್ತು ಸಂಪರ್ಕಿತರ ಪಟ್ಟಿ ಮತ್ತು ಟ್ರ್ಯಾಕಿಂಗ್ ನಡೆಸಲು ಸಹಾಯ ಮಾಡಬೇಕು.
2. ಆರೋಗ್ಯ ಅಧಿಕಾರಿಗಳು ಪಟ್ಟಿ ಮಾಡಿದಂತೆ ದೃಢ ಪ್ರಕರಣದ ಎಲ್ಲಾ ಸಂಪರ್ಕಿತರನ್ನು ಕ್ವಾರಂಟೈನ್ ಮಾಡಬೇಕು.
3. 1% ಸೋಡಿಯಂ ಹೈಪೋಕ್ಲೋರೈಟ್ ಬಳಸಿ ಎಲ್ಲಾ ಮೇಲ್ಮೈಗಳು, ಮಹಡಿಗಳು, ಲಿಫ್ಟ್‌ಗಳು, ರೇಲಿಂಗ್‌ಗಳು, ಮೆಟ್ಟಿಲುಗಳ ಮೇಜುಗಳು, ವಾಹನಗಳು ಸೇರಿದಂತೆ ಸಂಪೂರ್ಣ ಪಿಜಿ ಸೌಕರ್ಯಗಳನ್ನು ಸ್ವಚ್ಛಗೊಳಿಸಬೇಕು. ಪಿಜಿ ಸೌಲಭ್ಯಗಳನ್ನು ಮರುದಿನದಿಂದ ಮತ್ತೆ ಬಳಸಬಹುದು.
4. ಕೋವಿಡ್-19 ಸ್ಥಿತಿಯನ್ನು ಪರಿಗಣಿಸದೆ,  ಅಥಿತಿ ಅಥವಾ ಉದ್ಯೋಗಿ ಸಂಪರ್ಕಕ್ಕೆ ಬಂದ ಎಲ್ಲಾ ಮೇಲ್ಮೈಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ ಸ್ವಚ್ಛಗೊಳಿಸಬೇಕು.
5. ಇತರ ಎಲ್ಲಾ ಅಥಿತಿಗಳು ಸೋಪ್ ಮತ್ತು ನೀರಿನಿಂದ 20 ಸೆಕೆಂಡುಗಳ ಕಾಲ ತಮ್ಮ ಕೈಗಳನ್ನು ಚೆನ್ನಾಗಿ ತೊಳೆಯಬೇಕು ಅಥವಾ ಕೋವಿಡ್-19 ಗೆ ಅನುಗುಣವಾದ ರೋಗಲಕ್ಷಣಗಳೊಂದಿಗೆ ಅನಾರೋಗ್ಯದಿಂದ ಬಳಲುತ್ತಿರುವ ಯಾರೊಂದಿಗಾದರೂ ಯಾವುದೇ ಸಂಪರ್ಕದ ನಂತರ ಆಲ್ಕೋಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಜರ್‌ಗಳನ್ನು ಬಳಸಬೇಕು.